ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 19 ಚಾ ಸಾ 32

ಹೆಸರುಃ ದಲ್ಲೂಬಾಯ್

ಗಂಡನ ಹೆಸರುಃ ರಾಜು

ವಯಸ್ಸುಃ 32 ವರ್ಷ

ಉದ್ಯೋಗಃ ಬಟ್ಟೆ ವ್ಯಾಪಾರ .

ವಾಸಃ ಕೆ ಆರ್ ಎಸ್ ,ಬಜಾರ್ ಲೈನ್ .

ದಿಃ 12.06.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಗಂಗಾರಾಮು ಮತ್ತು ಆತನ ಹೆಂಡತಿ ಮೃತ ಲಕ್ಷ್ಮಿ ಗೊತ್ತು. ಗಂಗಾರಾಮು ನನ್ನ ಸ್ವಂತ ತಮ್ಮ. ಲಕ್ಷ್ಮಿ ಮತ್ತು ಗಂಗಾರಾಮುಗೆ 3 ಜನ ಮಕ್ಕಳು. ಅವರೆಂದರೆ ರಾಜು , ಕೋಮಲ್ ಮತ್ತು ಕುನಾಲ್ . ಲಕ್ಷ್ಮಿಯ ಕುಟುಂಬ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇತ್ತು.

2. ಸದರಿ ಲಕ್ಷ್ಮಿಯ ಕುಟುಂಬ ವಾಸ ಇದ್ದ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ ನಾನು , ನನ್ನ ತಾಯಿ ಮತ್ತು ಸಹೋದರರು ನಮ್ಮ ನಮ್ಮ ಕುಟುಂಬದ ಜೊತೆಯಲ್ಲಿ ವಾಸ ಇದ್ದೆವು . ಆದರೆ ನಾವು ಊರೂರಿಗೆ ಹೋಗಿ ಬಟ್ಟೆ ವ್ಯಾಪಾರ ಮಾಡಿಕೊಂಡು ಮನೆಗೆ ಬರುತ್ತಿದ್ದೆವು.

3. ಗಂಗಾರಾಮು ಪ್ಲಾಸ್ಟಿಕ್ ಹೂವು ಮತ್ತು ಬಟ್ಟೆ ವ್ಯಾಪಾರವನ್ನು ಊರೂರು ಸುತ್ತಿಕೊಂಡು ತಿಂಗಳಿಗೆ ಒಂದು ಸಲ ಅಥವಾ ಎರಡು ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದ.

4. ಆ ರೀತಿ ಆತ ವ್ಯಾಪಾರಕ್ಕೆ ಎಂದು ಹೊರಗೆ ಹೋದಾಗ ಮನೆಯಲ್ಲಿ ಲಕ್ಷ್ಮಿ ಮತ್ತು ಆಕೆಯ ಮಕ್ಕಳು ಇರುತ್ತಿದ್ದರು. ಅವರ ಜೊತೆಯಲ್ಲಿ ಗಣೇಶನ ಮಗ ಗೋವಿಂದ ಕೂಡ ಆ ಮನೆಯಲ್ಲಿ ವಾಸ ಮಾಡುತ್ತಿದ್ದ.

5. ಸುಮಾರು ಎರಡು ವರುಷದ ಹಿಂದೆ ವ್ಯಾಪಾರಕ್ಕೆ ಎಂದು ನಾವೆಲ್ಲರೂ ಕೋಲಾರಕ್ಕೆ ಹೋಗಿದ್ದೆವು . ಆಗ ಯಾರೋ ಫೋನ್ ಮಾಡಿ ಲಕ್ಷ್ಮಿ , ಆಕೆಯ ಮೂರು

ಜನ ಮಕ್ಕಳು ಮತ್ತು ಗಣೇಶನ ಮಗ ಗೋವಿಂದನನ್ನು ಲಕ್ಷ್ಮಿಯ ಮನೆಯಲ್ಲಿ ಯಾರೋ ಕೊಲೆ ಮಾಡಿ ಹೋಗಿದ್ದಾರೆ ಎಂಬ ವಿಚಾರವನ್ನು ನಮ್ಮ ಪಕ್ಕದ ಮನೆಯವರು ನಮಗೆ ಪೋನ್ ಮಾಡಿ ತಿಳಿಸಿದ್ದಾರೆ .

6. ಆ ಸಂದರ್ಭದಲ್ಲಿ ನಾನು , ನನ್ನ ತಮ್ಮ ಗಂಗಾರಾಮು ಮತ್ತು ತಾಯಿ ಕಕ್ಕೂಬಾಯಿ ಕೋಲಾರದಲ್ಲಿ ಇದ್ದೆವು.

7. ಆ ರೀತಿ ವಿಚಾರ ಗೊತ್ತಾದ ನಾವೆಲ್ಲರೂ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಬಂದು ಶವಾಗಾರದಲ್ಲಿದ್ದ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳ ಶವವನ್ನು ನೋಡಿದೆವು.

8. ಅಲ್ಲಿ ನಾವು ಪಿರ್ಯಾದಿ ಲಕ್ಷ್ಮಿಯನ್ನು ವಿಚಾರಣೆ ಮಾಡಿದಾಗ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳನ್ನು ಯಾರೋ ಕೊಲೆ ಮಾಡಿದ್ದಾರೆ ಎಂದು ತಿಳಿಸಿದಳು.

9. ರಾಜು ಮತ್ತು ಕೋಮಲ್ ನ ಶವದ ಮೇಲೆ ಪಂಚನಾಮೆ ಮಾಡುವಾಗ ನಾನು ಶವಾಗಾರದಲ್ಲಿ ಹಾಜರಿದ್ದೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ . ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ.

10. ನಾನು ನೋಡಿದಾಗ ಶವದ ತಲೆಯಲ್ಲಿ ಮತ್ತು ಮುಖದ ಭಾಗದಲ್ಲಿ ಏಟುಗಳಿದ್ದವು.

11. ನಾನು ನೋಡಿದಾಗ ಕೋಮಲ್ ನ ಶವದಲ್ಲೂ ಕೂಡ ತಲೆಯಲ್ಲಿ ಮತ್ತು ಹಣೆಯಲ್ಲಿ ಹಾಗೂ ಮುಖದಲ್ಲಿ ಗಾಯಗಳಿದ್ದವು. ಅಲ್ಲಿಯೂ ಕೂಡ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

12. ಪೊಲೀಸರು ಶವವನ್ನು ನೋಡಿಕೊಂಡು ಬರವಣಿಗೆಯನ್ನು ಮಾಡಿದ್ದಾರೆ . ಈ ಹಂತದಲ್ಲಿ ಗುರುತಿಗಾಗಿ ಕೋಮಲ್ ನ ಶವ ಪಂಚನಾಮೆಯನ್ನು ನಿಪಿ 33 ಎಂದು ಗುರುತಿಸಲಾಯಿತು.

13. ರಾಜುವಿನ ಶವ ಪಂಚನಾಮೆ ಮಾಡಿದಾಗ ನಿಪಿ 32 ರಂತೆ ಪೊಟೋಗಳನ್ನು ಮತ್ತು ಕೋಮಲ್ ನ ಶವ ಪಂಚನಾಮೆ ಮಾಡುವಾಗ 4 ಪೊಟೋಗಳನ್ನು ನಿಪಿ 34 ರಂತೆ ತೆಗೆದಿರುತ್ತಾರೆ .

14. ರಾಜುವಿನ ಮತ್ತು ಕೋಮಲ್ ನ ಶವಗಳನ್ನು ನೋಡಿದಾಗ ಯಾವುದೋ ಆಯುಧದಿಂದ ಅವರಿಬ್ಬರಿಗೆ

ತಲೆಗೆ ಮತ್ತು ಮುಖದ ಭಾಗಕ್ಕೆ ಜೋರಾಗಿ ಹೊಡೆದು ಅವರಿಬ್ಬರನ್ನು ಸಾಯಿಸಿದ್ದಾರೆ ಎಂದು ಕಂಡುಬಂತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ಆರ್ ಎಸ್ ವಕೀಲರಿಂದಃ

15. ನಾವು ಕೋಲಾರದಿಂದ ಬೆಳಗ್ಗೆ 11 ಗಂಟೆಗೆ ಹೊರಟು ಸಂಜೆ 4.30 ಗಂಟೆಗೆ ಕೆ ಆರ್ ಆಸ್ಪತ್ರೆಗೆ ತಲುಪಿದ್ದೇವೆ . ಈ ದಿವಸ ನುಡಿದ ಸಾಕ್ಷ್ಯವನ್ನು ನಾನು ಪೊಲೀಸರ ಬಳಿ ತಿಳಿಸಿದ್ದೇನೆ.

16. ರಾಜು ಮತ್ತು ಕೋಮಲ್ ನ ಶವ ಪಂಚನಾಮೆಗಳಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)